**ಅ.ದಾವಾ. 199/2020** **ಡಿ .ಡಬ್ಲ್ಯೂ- 1**

**ದಿನಾಂಕಃ 22/01/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ- ಶ್ರೀ ಕೆ.ಎನ್.ವಿ. ವಕೀಲರಿಂದ ವಾದಿಯ ಪರವಾಗಿ.**

ನನಗೆ ಓದಲು ಬರುತ್ತದೆ. ನಿಪಿ 3 ಅನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಯತೀಶ್ ಕಿರಣ್.ವೈ.ಆರ್ ಎನ್ನುವ ಹೆಸರನ್ನು ಹೊರತುಪಡಿಸಿ ಸದರಿ ಆಧಾರ್ ಕಾರ್ಡ್ ಅನ್ನು ಹೊಂದಿರುವ ವ್ಯಕ್ತಿಯ ಬೇರೆ ಯಾವುದೇ ಹೆಸರು ಅದರಲ್ಲಿ ಇಲ್ಲ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ನಿಪಿ 4 ರಲ್ಲಿಯು ಯತೀಶ್ ಕಿರಣ್.ವೈ.ಆರ್ ಎಂದೇ ಇದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಪಿ 3 ಮತ್ತು 4 ರಲ್ಲಿ ಯತೀಶ್ ಕಿರಣ್.ವೈ.ಆರ್ ರವರ ಬೇರೆ ಯಾವುದೆ ಉಪ ಹೆಸರು ಇಲ್ಲ ಎಂದರೆ ಸರಿ .

ನಿಡಿ 2 ರಲ್ಲಿ ಯತೀಶ್ ಕಿರಣ್ ಎಂದು ಹೆಸರು ಇಲ್ಲ ಎಂದರೆ ಸರಿ . ದಾವಾನುಸೂಚಿ ಸ್ವತ್ತಿನಲ್ಲಿ ಇರುವ ತೆಂಗಿನ ಮರಗಳು ಸುಮಾರು 12 ರಿಂದ 13 ವರ್ಷಗಳ ಹಳೆಯ ತೆಂಗಿನ ಮರಗಳು. ದಾವಾನುಸೂಚಿ ಸ್ವತ್ತು 1 ಎಕರೆ 8 ಗುಂಟೆ ಆಗಿರುತ್ತದೆ. ಅದರಲ್ಲಿ ಒಟ್ಟು 60 ತೆಂಗಿನ ಮರಗಳು ಇರುತ್ತದೆ. ಸದರಿ ತೆಂಗಿನ ಮರಗಳನ್ನು ಹೊರತು ಪಡಿಸಿ 2 ಸಿಲ್ವರ್ ಮರಗಳು ಇರುತ್ತದೆ. ದಾವಾನುಸೂಚಿ ಸ್ವತ್ತಿನ ಅಕ್ಕಪಕ್ಕ ನನ್ನ ಜಮೀನು ಇರುವುದಿಲ್ಲ. ನನ್ನ ಸ್ವಯಾರ್ಜಿತ ಜಮೀನು ಕಟ್ಟೆಬೆಳಗುಲಿ ಗ್ರಾಮದ ಸರ್ವೆ ನಂ. 97/10, 100/3 ರಲ್ಲಿ ಇರುತ್ತದೆ. ನಮ್ಮ ಜಮೀನಿಗೂ ದಾವಾನುಸೂಚಿ ಸ್ವತ್ತಿಗೂ ಸುಮಾರು 1 ಕಿ.ಮೀ ಅಂತರವಿದೆ. ನಾನು 1 ಮತ್ತು 2ನೇ ಪ್ರತಿವಾದಿಯರಿಂದ ಜಮೀನನ್ನು ಬರೆಯಿಸಿಕೊಂಡಿರುತ್ತೇನೆ ಎನ್ನುವ ಸಮಯದಲ್ಲಿ ಅವರಿಗೆ ಕ್ರಯದ ಪತ್ರಿಫಲವನ್ನು ನಗದಾಗಿ ಕೊಟ್ಟಿರುತ್ತೇನೆ. ನಾನು ಕ್ರಯದ ಪ್ರತಿಫಲವಾಗಿ 3 ಲಕ್ಷದ 12 ಸಾವಿರ ರೂಪಾಯಿ ಹಣವನ್ನು ಕೊಟ್ಟಿರುತ್ತೇನೆ. ನಾನು ಕೊಟ್ಟ ಸದರಿ ಹಣ ಎಷ್ಟೆಷ್ಟು ಮುಖಬೆಲೆಯ ಎಷ್ಟೆಷ್ಟು ನೋಟುಗಳೆಂದು ನಿಖರವಾಗಿ ಹೇಳಲು ಆಗುವುದಿಲ್ಲ. ಸದರಿ ಹಣದ ಪೈಕಿ ಸ್ವಲ್ಪ ಹಣವನ್ನು ಬ್ಯಾಂಕ್ ನಿಂದ ತಂದಿದ್ದು, ಇನ್ನು ಸ್ವಲ್ಪ ಹಣ ಒಡವೆಯನ್ನು ಇಟ್ಟು ತಂದಿದ್ದು ಹಾಗೂ ಸ್ವಲ್ಪ ಹಣವನ್ನು ಕೈಸಾಲವಾಗಿ ಪಡೆದುಕೊಂಡಿರುವುದು ಆಗಿತ್ತು. ಆ ರೀತಿ ಹಣವನ್ನು ಬ್ಯಾಂಕ್ ನಿಂದ ತೆಗೆದುಕೊಂಡು ಬಂದಿರುವುದಕ್ಕೆ

ಅಥವಾ ಒಡವೆಯನ್ನು ಇಟ್ಟಿರುವುದಕ್ಕೆ ಸಂಬಂಧಪಟ್ಟ ದಾಖಲೆಗಳು ಯಾವುದಾದರು ಇದೆಯೇ ಎಂದರೆ ಸಾಕ್ಷಿಯು ಅದು ಹಳೆಯದಾಗಿರುವುದರಿಂದ ಈಗ ಇಲ್ಲ ಎಂದು ನುಡಿಯುತ್ತಾರೆ.

1 ಮತ್ತು 2ನೇ ಪ್ರತಿವಾದಿಯರು ದಾವಾನುಸೂಚಿ ಸ್ವತ್ತನ್ನು ನಿಮಗೆ ಬರೆದುಕೊಟ್ಟಿದ್ದು ಅವರ ಮಕ್ಕಳು ಈ ದಾವೆಯನ್ನು ಸದರಿ ಸ್ವತ್ತಿನ ಮೇಲೆ ಹಾಕಿರುವುದಕ್ಕೆ ನೀವು 1 ಮತ್ತು 2ನೇ ಪ್ರತಿವಾದಿಯರ ವಿರುದ್ಧ ಯಾವುದಾದರು ಕ್ರಮ ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಹೂಡಿದ ನಂತರ 1 ಮತ್ತು 2ನೇ ಪ್ರತಿವಾದಿಗಳನ್ನು ಭೇಟಿಯಾಗಿ ವಿಚಾರ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ಹೌದು ಆಗ ನನ್ನ ಮಗ ದಾವೆ ಹಾಕಿದ್ದಾನೆ ಎಂದು ಹೇಳಿದರು ಎಂದು ನುಡಿಯುತ್ತಾರೆ. ನಾನು ಕ್ರಯಪತ್ರವನ್ನು ಬರೆಯಿಸಿಕೊಳ್ಳುವ ಸಮಯದಲ್ಲಿ ಅದನ್ನು ಸಂಪೂರ್ಣವಾಗಿ ಓದಿದ್ದೇನೆ. ನಿಡಿ 2 ರಲ್ಲಿ ಯಾವುದೇ ತಂಟೆ ತಕರಾರು ಬಂದರೂ ನಾವೇ ಅದನ್ನು ಬಗೆಹರಿಸುವುದಾಗಿ ಬರೆದಿದ್ದು, ಆ ರೀತಿ 1 ಮತ್ತು 2ನೇ ಪ್ರತಿವಾದಿಯರನ್ನು ನೀವು ಹೋಗಿ ಕೇಳಿದ್ದೀರಾ ಎಂದರೆ ಸಾಕ್ಷಿಯು ಹೌದು, ನಾನು ಹೋಗಿ ಕೇಳಿದಾಗ ನಾವೇ ಬಗೆಹರಿಸಿಕೊಡುತ್ತೇವೆ ಎಂದು ಹೇಳಿದರು ಎಂದು ನುಡಿಯುತ್ತಾರೆ. ನಿಡಿ 2 ರ ಪತ್ರದ ಪ್ರಕಾರ 1 ಮತ್ತು 2ನೇ ಪ್ರತಿವಾದಿಯರು ನಡೆದುಕೊಂಡಿಲ್ಲ ಎಂದು ಅವರುಗಳ ವಿರುದ್ಧ ನಾನು ಯಾವುದೇ ದಾವೆಯನ್ನು ಹೂಡಿಲ್ಲ. ನಿಡಿ 2 ರಲ್ಲಿ ಇರುವ ಈಶ್ವರಪ್ಪ ಎಂದರೆ 1ನೇ ಪ್ರತಿವಾದಿಯ ತಂದೆ 2ನೇ ಪ್ರತಿವಾದಿಯ ಮಾವ. ನಾನು ದಾವಾನುಸೂಚಿ ಸ್ವತ್ತನ್ನು ಬರೆಯಿಸಿಕೊಳ್ಳುವ ಸಮಯದಲ್ಲಿ ಅದರ ಪಹಣಿ 1ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು.

ಈಶ್ವರಪ್ಪ  ಬಿನ್ ಚನ್ನಬಸಪ್ಪರವರಿಗೆ ಒಬ್ಬ ಮಗಳು ಹಾಗೂ  ಒಬ್ಬ ಮಗ. ಅವರ ಮಗಳ ಹೆಸರು ಶಿವಕುಮಾರಿ .ಶಿವಕುಮಾರಿರವರ ಸಹಿಯನ್ನು ನಿಡಿ 2 ರಲ್ಲಿ ಪಡೆದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ.  1ನೇ ಪ್ರತಿವಾದಿ 10ನೇ ತರಗತಿಯವರೆಗೆ ಓದಿರುತ್ತಾರೆ ಮತ್ತು 2ನೇ ಪ್ರತಿವಾದಿಯರು ಎಲ್ಲಿಯವರೆಗೆ ಓದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.  1 ಮತ್ತು 2ನೇ ಪ್ರತಿವಾದಿಯರು ಸಹಿ ಮಾಡುತ್ತಾರೆ. 1ನೇ ಪ್ರತಿವಾದಿ ಓದುತ್ತಾರೆ, 2ನೇ ಪ್ರತಿವಾದಿ ಓದುತ್ತಾರಾ  ಎಂದು ನನಗೆ ಗೊತ್ತಿಲ್ಲ. ನಿಮಗೂ 1ನೇ ಪ್ರತಿವಾದಿಗೂ ಹೊಂದಾಣಿಕೆ ಚೆನ್ನಾಗಿತ್ತು ಎಂದರೆ ಸಾಕ್ಷಿಯು ನಾವಿಬ್ಬರು ಅಕ್ಕ-ಪಕ್ಕದ ಊರಿನವರು ಆದ್ದರಿಂದ ಸಾಮಾನ್ಯವಾಗಿ ಮಾತುಕತೆ ಇತ್ತು ಎಂದು ನುಡಿಯುತ್ತಾರೆ.

ನಾನು ನನ್ನ ಶಾಮೀಯಾನ ಅಂಗಡಿಯಲ್ಲಿ ಕ್ರಯದ ಪ್ರತಿಫಲವನ್ನು ಕೊಟ್ಟಿರುತ್ತೇನೆ. ಅದನ್ನು 1, 2ನೇ ಪ್ರತಿವಾದಿ ಹಾಗೂ 1ನೇ ಪ್ರತಿವಾದಿಯ ತಂದೆ ತೆಗೆದುಕೊಂಡಿರುತ್ತಾರೆ. ನಿಡಿ 2 ರ ಕ್ರಯಪತ್ರವನ್ನು ಬರೆಯಿಸುವ ಮುಂಚೆ ಯಾವುದೇ ಕರಾರು ಪತ್ರ ಆಗಿರಲಿಲ್ಲ. ನಿಡಿ 2 ರ ಪತ್ರವನ್ನು ಬರೆಯಿಸುವ ಮುಂಚೆ ನಮ್ಮ ಊರಿನಲ್ಲಿ ಮಾತುಕತೆಯಾಗಿತ್ತು. ಸದರಿ ಮಾತುಕತೆ ಸಮಯದಲ್ಲಿ ನಾನು 1 ಮತ್ತು 2ನೇ ಪ್ರತಿವಾದಿಯರಿಗೆ 50 ಸಾವಿರ ರೂಪಾಯಿ ಹಣವನ್ನು ಕೊಟ್ಟಿರುತ್ತೇನೆ ಸಾಕ್ಷಿಯು ಅದಕ್ಕಿಂತ ಮುಂಚೆಯೇ ಅವರು 50 ಸಾವಿರ ರೂಪಾಯಿ ಹಣವನ್ನು ಅವರು ಸಾಲವಾಗಿ ತೆಗೆದುಕೊಂಡಿರುತ್ತಾರೆ. ಸದರಿ 50 ಸಾವಿರ ರೂಪಾಯಿ ಸಾಲದ ವ್ಯವಹಾರದ ಮುಂಚೆ ಬೇರೆ ಯಾವುದೇ ಸಾಲದ ವ್ಯವಹಾರ ಆಗಿರಲಿಲ್ಲ. ಮಾತುಕತೆಯ ದಿನ ಯಾವುದೇ ಪತ್ರ ಆಗಿರಲಿಲ್ಲ. ನನ್ನಿಂದ 1 ಮತ್ತು 2ನೇ ಪ್ರತಿವಾದಿಯರು 50 ಸಾವಿರ ರೂಪಾಯಿ ಹಣವನ್ನು ಸಾಲವಾಗಿ ತೆಗೆದುಕೊಂಡಾಗ ನನಗೆ ಒಂದು ಚೆಕ್ ಅನ್ನು ಕೊಟ್ಟಿದ್ದರು. ಸದರಿ 50 ಸಾವಿರ ರೂಪಾಯಿ ಹಣವನ್ನು ಶೇ. 2 ಬಡ್ಡಿಗೆ ಕೊಟ್ಟಿರುತ್ತೇನೆ. ನಿಡಿ 2 ರ ಮಾತುಕತೆಯ 3 ತಿಂಗಳ ಹಿಂದೆ ನಾನು ಸದರಿ 50 ಸಾವಿರ ರೂಪಾಯಿ ಹಣವನ್ನು ಅವರಿಗೆ ಕೊಟ್ಟಿದ್ದೆನು. ನಿಡಿ 2 ರ ಪತ್ರ ಆದ ದಿನ 1 ಲಕ್ಷ ರೂಪಾಯಿಯನ್ನು ಕಳೆದು ಉಳಿದ 2 ಲಕ್ಷದ 12 ಸಾವಿರ ರೂಪಾಯಿ ಹಣವನ್ನು ನಾನು ಸದರಿ ಪ್ರತಿವಾದಿಯರಿಗೆ ಕೊಟ್ಟಿರುತ್ತೇನೆ. ಸದರಿ 50 ಸಾವಿರ ರೂಪಾಯಿ ಸಾಲಕ್ಕೆ 3 ತಿಂಗಳಿಗೆ 3 ಸಾವಿರ ರೂಪಾಯಿ ಹಣವನ್ನು ಬಡ್ಡಿಯಾಗಿ ಕೊಟ್ಟಿರುತ್ತಾರೆ. ನಿಡಿ 2 ರ ಕ್ರಯಪತ್ರದ ಮುಂಚೆ ನನ್ನ ಹಾಗೂ 1 ಮತ್ತು 2ನೇ ಪ್ರತಿವಾದಿಯರ ನಡುವೆ ಏನೇನು ವ್ಯವಹಾರ ಆಗಿತ್ತೋ ಅದರ ಹಣದ ಬಗ್ಗೆ ನಿಡಿ 2 ರಲ್ಲಿ ಬರೆಯಿಸಿಲ್ಲ.

1ನೇ ಪ್ರತಿವಾದಿಗೆ ಒಟ್ಟು ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ದಾವಾನುಸೂಚಿ ಸ್ವತ್ತೇ 1ನೇ ಪ್ರತಿವಾದಿಗೆ ಮೂಲ ಆಧಾರ ಎಂದರೆ ನನಗೆ ಗೊತ್ತಿಲ್ಲ. ನಾನು 1 ಮತ್ತು 2ನೇ ಪ್ರತಿವಾದಿಯರಿಗೆ 50 ಸಾವಿರ ರೂಪಾಯಿ ಹಣವನ್ನು ಸಾಲವಾಗಿ ಕೊಟ್ಟಿರುವುದಕ್ಕೆ ವಾದಿಯರಿಗೆ ತಿಳಿಯದ ಹಾಗೆ ಸದರಿ ಪ್ರತಿವಾದಿಯರೊಂದಿಗೆ ಷರೀಕ್ಕಾಗಿ ಅವರಿಗೆ ಬೇರೆ ಯಾವುದೇ ಹಣವನ್ನು ಕೊಡದೆ ನಿಡಿ 2 ಪತ್ರವನ್ನು ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಪ್ರತಿವಾದಿಯರಿಗೆ ಕೊಟ್ಟಿದ್ದೆ ಎನ್ನಲಾದ 50 ಸಾವಿರ ರೂಪಾಯಿ ಹಣಕ್ಕೆ ಆಧಾರವಾಗಿ ಅವರು ನನಗೆ ಚೆಕ್ ಅನ್ನು ಕೊಟ್ಟಿದ್ದರು. ಸದರಿ ಚೆಕ್ 1ನೇ ಪ್ರತಿವಾದಿಯ ಹೆಸರಿನದ್ದು, ಅದು ಯಾವ ಬ್ಯಾಂಕ್ ನದ್ದು ಎಂದು ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿಯು

ಕೂಡ ಒಂದು ಚೆಕ್ ಅನ್ನು ಕೊಟ್ಟಿದ್ದರು. ನಿಡಿ 2 ರ ಪತ್ರ ನೊಂದಣಿಯಾದ ದಿನವೇ ಸದರಿ 2 ಚೆಕ್ ಗಳನ್ನು ವಾಪಸ್ಸು ಕೊಟ್ಟಿರುತ್ತೇನೆ. ಸದರಿ 2 ಚೆಕ್ ಗಳನ್ನು ನಾನು ಇಟ್ಟುಕೊಂಡು 1 ಮತ್ತು 2ನೇ ಪ್ರತಿವಾದಿಯರನ್ನು ಹೆದರಿಸಿ ನಾನು ಅವರಿಗೆ ಕೊಟ್ಟಿರುವ 50 ಸಾವಿರ ಸಾಲಕ್ಕಾಗಿ ನಿಡಿ 2 ರ ಪತ್ರವನ್ನು ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಬಡ್ಡಿ ವ್ಯವಹಾರ ಮಾಡುವುದಿಲ್ಲ. ನೀವು 50 ಸಾವಿರ ರೂಪಾಯಿ ಹಣವನ್ನು 1 ಮತ್ತು 2ನೇ ಪ್ರತಿವಾದಿಯರಿಗೆ ಶೇ. 10 ಬಡ್ಡಿಗೆ ಕೊಟ್ಟಿದ್ದು, ಅದು ಬಡ್ಡಿಗೆ ಬಡ್ಡಿ ಬೆಳೆದಿರುವುದಕ್ಕೆ ನಿಡಿ 2 ರ ಪತ್ರವನ್ನು ಅವರಿಂದ ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಈ ವಿಚಾರ ಗೊತ್ತಾದರೆ ತೊಂದರೆ ಆಗುತ್ತದೆ ಎಂದು ಅವರಿಗೆ ಈ ವಿಚಾರವನ್ನು ತಿಳಿಸಿಲ್ಲ ಎಂದರೆ ಸಾಕ್ಷಿಯು ವಿಚಾರವನ್ನು ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಜಮೀನನ್ನು ಬರೆಯಿಸಿಕೊಳ್ಳುವ ಸಮಯದಲ್ಲಿ 2ನೇ ವಾದಿಯ ಮದುವೆ ಆಗಿರಲಿಲ್ಲ. 2ನೇ ವಾದಿಗೆ ಯಾವ ವರ್ಷ ಮದುವೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆಸ್ತಿಯನ್ನು ಸದರಿ ಪ್ರತಿವಾದಿಯರು ಬರೆದುಕೊಟ್ಟಿರುತ್ತಾರೆ ಎನ್ನುವ ಸಂದರ್ಭದಲ್ಲಿ ಅವರು ಹೊಸ ಮನೆಯನ್ನು ಏನಾದರು ಕಟ್ಟಿದ್ದಾರಾ ಎಂದರೆ ಸಾಕ್ಷಿಯು ಇಲ್ಲ ಮುಂಚೆಯೇ ಕಟ್ಟಿದ್ದು ಅದಕ್ಕಾಗಿ ಸಾಲ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ಅವರು ಸಾಲ ಮಾಡಿರುತ್ತಾರೆ ಎಂದು ತಿಳಿದಿದ್ದರು ಕೂಡ ನೀವು ಅವರಿಗೆ ಸಾಲ ಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ಮನೆ ಕಟ್ಟುವ ಸಮಯದಲ್ಲಿ ಸದರಿ ಪ್ರತಿವಾದಿಯರು ಸಾಲ ತೆಗೆದುಕೊಂಡಿರುವುದು ಎಂದು ನುಡಿಯುತ್ತಾರೆ.

1 ಮತ್ತು 2ನೇ ಪ್ರತಿವಾದಿಯರು ನಿರ್ಮಿಸಿಕೊಂಡಿರುವ ಮನೆಯ ಹಿಂಭಾಗ ಹಂಚಿನ ಮನೆಯಾಗಿದ್ದು, ಮುಂಭಾಗ ಆರ್.ಸಿ.ಸಿ ಮನೆಯ ತರ ಡಿಸೈನ್ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 2015 ನೇ ಇಸವಿಯನ್ನು ನಾನು ಪ್ರತಿವಾದಿಯರ ಮನೆಯನ್ನು ನೋಡಿರುತ್ತೇನೆ. ಈಗಲೂ ಕೂಡ ನಾನು ಅವರ ಮನೆಯನ್ನು ನೋಡುತ್ತಿರುತ್ತೇನೆ. 1 ಮತ್ತು 2ನೇ ಪ್ರತಿವಾದಿಯರ ಮನೆ ಬಿದ್ದು ಹೋಗಿರುತ್ತದೆ ಎಂದು ಪಂಚಾಯ್ತಿಯಿಂದ ಪರಿಹಾರ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದು ಹಳೆಯ ಮನೆ ಬಿದ್ದು ಹೋಗಿರುವುದು ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿಯರು ಯಾವುದೇ ಮನೆಯನ್ನು ನಿರ್ಮಿಸದೇ ಇದ್ದರು ನಾನು ಅವರಿಗೆ ನೀಡಿದ ಸಾಲಕ್ಕಾಗಿ ನಿಡಿ 2 ಅನ್ನು ಬರೆಯಿಸಿಕೊಂಡಿದ್ದು, ಅದನ್ನು ಮುಚ್ಚಿ ಹಾಕಲೆಂದು ಅವರು ಆರ್.ಸಿ.ಸಿ ಮನೆ ನಿರ್ಮಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. 50 ಸಾವಿರ ರೂಪಾಯಿ ಹಣವನ್ನು ಸದರಿ ಪ್ರತಿವಾದಿಯರು ಸಾಲವಾಗಿ ಪಡೆದಿರುವುದಕ್ಕೆ ಜಮೀನನ್ನು ವ್ಯವಸಾಯ ಮಾಡಿಕೊಳ್ಳಲೆಂದು ನಮಗೆ ಬಿಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಇದ್ದ ತೆಂಗಿನ ಕಾಯಿ ಹಾಗೂ ಬೆಳಯನ್ನು ತೆಗೆದುಕೊಳ್ಳಲು ನನಗೆ ಬಿಟ್ಟಿದ್ದರು ಎಂದರೆ ಸರಿಯಲ್ಲ. ದಾವಾನುಸೂಚಿ ಸ್ವತ್ತಿನಲ್ಲಿ ಇದ್ದ ತೆಂಗಿನ ಮರಗಳಿಂದ 3 ತಿಂಗಳಿಗೆ ಒಂದು ಬಾರಿ 2 ರಿಂದ 3 ಸಾವಿರ ರೂಪಾಯಿ ಆದಾಯ ಬರುತ್ತಿತ್ತು ಎಂದರೆ ಸಾಕ್ಷಿಯು ನಿಡಿ 2 ರ ಪತ್ರವನ್ನು ನೋಂದಣಿ ಮಾಡಿಸಿಕೊಡುವವರೆಗೂ ನಾನು ದಾವಾನುಸೂಚಿ ಸ್ವತ್ತಿಗೆ ಕೈ ಹಾಕಿಲ್ಲ ಎಂದು ನುಡಿಯುತ್ತಾರೆ.ನಾನು ಸದರಿ ಸ್ವತ್ತಿನ ಬಳಿ ಹೋದಾಗ ಅಲ್ಲಿ 60 ತೆಂಗಿನ ಮರಗಳು ಇದ್ದವು. ಕ್ರಯಪತ್ರ ಆಗುವ ಮುಂಚಿತವಾಗಿ ದಾವಾನುಸೂಚಿ ಸ್ವತ್ತಿನಲ್ಲಿ 1 ಮತ್ತು 2ನೇ ಪ್ರತಿವಾದಿಯರು ಬೆಳೆ ಮಾಡುತ್ತಿದ್ದರು ಎಂದರೆ ಸರಿ . ದಾವಾನುಸೂಚಿ ಸ್ವತ್ತಿನಲ್ಲಿ ಈಗಲೂ 1 ಮತ್ತು 2ನೇ ಪ್ರತಿವಾದಿಯರು ಸ್ವಾಧೀನ ಇದ್ದು ನೀವು 50 ಸಾವಿರ ರೂಪಾಯಿ ಸಾಲ ಕೊಟ್ಟಿರುವುದಕ್ಕೆ ಅವರಿಂದ ನಿಡಿ 2 ರ ಪತ್ರವನ್ನುಬರೆಯಿಸಿಕೊಂಡಿದ್ದು ವಾಪಸ್ಸು ಸದರಿ ಪ್ರತಿವಾದಿಯರು ನಿಮ್ಮನ್ನು ಕೇಳಿದಾಗ ಅವರನ್ನು ಬೆದರಿಸಿರುತ್ತೀರಿ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿದು ಈಗಲೂ ನಾನೇ ಸ್ವಾಧೀನದಲ್ಲಿ ಇದ್ದೇನೆ ಎಂದು ನುಡಿಯುತ್ತಾರೆ. 1 ಮತ್ತು 2ನೇ ಪ್ರತಿವಾದಿಯರು ಹಾಗೂ 1ನೇ ಪ್ರತಿವಾದಿಯ ತಂದೆಯಿಂದ ನಂಬಿಕೆಯ ಕ್ರಯವನ್ನು ಮಾಡಿಕೊಂಡು ನಂತರ ಅವರಿಗೆ ನಂಬಿಕೆ ದ್ರೋಹ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಕ್ರಯಪತ್ರ ಮಾಡಿಕೊಂಡಿರುವ ವಿಚಾರ ವಾದಿಯರಿಗೆ ತಿಳಿದಿಲ್ಲ, ಅವರೇ ಈಗಾಲೂ ಸ್ವಾಧೀನದಲ್ಲಿ ಇದ್ದು, ಅವರು ಸದರಿ ಸ್ವತ್ತಿಗೆ ಹಿಸ್ಸೆಗಾಗಿ ಈ ದಾವೆಯನ್ನು ಹೂಡಿದ್ದು, ನಾನು ಕ್ರಯಬದ್ಧವಲ್ಲದ ಕ್ರಯಪತ್ರವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

1ನೇ ವಾದಿ ದಾವಾನುಸೂಚಿ ಸ್ವತ್ತಿನ ಹಿಸ್ಸೆ ಕೇಳಲೆಂದು ದಾಖಲಾತಿಗಳನ್ನು ಪರಿಶೀಲನೆ ಮಾಡಲು ಹೋದಾಗ ನಿಡಿ2 ರ ವಿಚಾರ ಅವರಿಗೆ ತಿಳಿದಿರುತ್ತದೆ ಎಂದರೆ ಸಾಕ್ಷಿಯು ನಾವು ಮಾಮೂಲಿಯಾಗಿ ದಾವಾನುಸೂಚಿ ಸ್ವತ್ತನ್ನು ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ.

ನಾವು ಒಟ್ಟು 4 ಜನ ಅಣ್ಣ ತಮ್ಮಂದಿರು. ನಾವು ಪ್ರತ್ಯೇಕವಾಗಿ ವಾಸವಾಗಿದ್ದೇವೆ. ನಾವು ಪ್ರತ್ಯೇಕವಾಗಿ 27 ವರ್ಷಗಳಾಯಿತು. ನನಗೆ ಮಧ್ಯಪಾನ ಮಾಡುವ ಅಭ್ಯಾಸ ಇರುವುದಿಲ್ಲ, 1ನೇ ಪ್ರತಿವಾದಿಗೂ ಮಧ್ಯಪಾನ

ಮಾಡುವ ಅಭ್ಯಾಸ ಇರುವುದಿಲ್ಲ. ಸಾಕ್ಷಿಯು 1ನೇ ಪ್ರತಿವಾದಿಯಾಗಲೀ ಅವರ ತಂದೆಯಾಗಲೀ ಬೀಡಿಯನ್ನು ಸೇದುವುದಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಹಾಗೂ ಅವರ ತಂದೆ ಮುಗ್ಧ ಜೀವಿಗಳು ಎಂದರೆ ಸರಿ . 1ನೇ ಪ್ರತಿವಾದಿ ಹಾಗೂ ಅವರ ತಂದೆ ಮುಗ್ಧ ಜೀವಿಗಳು ಆಗಿರುವುದರಿಂದ ಅವರನ್ನು ಹೆದರಿಸಿ ನಿಡಿ 2 ರ ಪತ್ರವನ್ನು ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಕಾನೂನು ಪ್ರಕಾರವಾಗಿ ನಿಡಿ 2 ರ ಪತ್ರವನ್ನು ನೋಂದಣಿ ಮಾಡಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ 2 ರ ಪತ್ರದಲ್ಲಿ ಬರೆಯಿಸಿರುವ ಹೆಸರುಗಳು ಹಾಗೂ ಹಣದ ವಿಚಾರ ಎಲ್ಲವೂ ಸುಳ್ಳು ಎಂದರೆ ಸರಿಯಲ್ಲ. ನಿಡಿ 2 ರ ಪತ್ರ ಕಾನೂನ ಬದ್ಧವಾಗಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.